**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ</u>**

**ಸಿ.ಸಿ.ನಂಃ 94/2024**

ಪಿರ್ಯಾರ್ದುದಾರಃ 1. ಕರ್ನಾಟಕ ಸರ್ಕಾರದ ಪರ ಜೇವರ್ಗಿ ಪೋಲಿಸರು

**ವಿರುದ್ಧ**

ಆರೋಪಿ

ಷಾ-ಹುಸೇನ ತಂದೆ ಮಲಿಕಸಾಬ ಭಾಗವಾನ
ವಃ 38 ವರ್ಷ, ಉಃ ಕೂಲಿ ಕೆಲಸ,
ಸಾಃ ಮಹಿಬೂಬಸುಭಾನಿ ದರ್ಗಾ ಹತ್ತಿರ ಜೇವರ್ಗಿ,
ತಾಃ ಜೇವರ್ಗಿ ಜಿಃ ಕಲ್ಬುರ್ಗಿ.

**<u>ಆಪಾದನೆ</u>**

ಶ್ರೀಮತಿ ತಯ್ಯಬಾ ಸುಲ್ತಾನಾ, ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ದಿನಾಂಕ 05-03-2023ರಂದು ರಾತ್ರಿ 09-30 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಜೇವರ್ಗಿ ಪಟ್ಟಣದ ಗುರುಕುಲ ಶಾಲೆ ಹತ್ತಿರದ ರಸ್ತೆಯ ಮೇಲೆ ಆರೋಪಿಯಾದ ನೀವು ವಾಹನ ಚಾಲನಾ ಪರವಾನಿಗೆ ಇಲ್ಲದೇ ಹಾಗೂ ವಾಹನಕ್ಕೆ ವಿಮೆ ಮಾಡಿಸದೇ ಹಾಗೂ ಸಂಚಾರಿ ನಿಯಮಗಳನ್ನು ಪಾಲಿಸದೇ ನಿಮ್ಮ ಮೋಟಾರ್ ಸೈಕಲ್ ಸ್ಕೂಟಿ ನಂ.ಕೆಎ-32 ಡಬ್ಲು-7968ನೇದ್ದನ್ನು ಅತೀ ವೇಗ ಮತ್ತು ಅಜಾಗುರಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರುಗಡೆಯಿಂದ ಚಾಸಾ-4ರವರು ಚಲಾಯಿಸಿಕೊಂಡು ಬರುತ್ತಿದ್ದ ಮೋಟಾರ್ ಸೈಕಲ್ ನಂ.ಕೆಎ-32 ಇಡಬ್ಲು-0759ನೇದ್ದಕ್ಕೆ ಎದುರಿನಿಂದ ಡಿಕ್ಕಿಪಡಿಸಿದ ಕಾರಣ ಸದರಿ ವಾಹನದ ಸವಾರರು ವಾಹನ ಸಮೇತ ಕೆಳಗೆ ಬಿದ್ದಿದ್ದರಿಂದ ಚಾಸಾ-4 ಶರಣಕುಮಾರರವರ ತಲೆಗೆ ಭಾರಿ ಗುಪ್ತಗಾಯ ಮತ್ತು ಮೇಲಿನ ತುಟಿ ಹರಿದು ಭಾರಿ ರಕ್ತಗಾಯಗಳಾಗುವಂತೆ ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 279, 338 ಹಾಗೂ ಭಾರತೀಯ ಮೋಟಾರ ವಾಹನ ಕಾಯ್ದೆ ಕಲಂ.181, 196, 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ ಬಗ್ಗೆ ಆರೋಪಿಸಲಾಗಿದೆ?

ಸದರಿ ಆಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಶ್ನೆ-2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

(ಶ್ರೀಮತಿ ತಯ್ಯಬಾ ಸುಲ್ತಾನಾ)
ಹಿರಿಯ ಸಿವಿಲ್ ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಜೇವರ್ಗಿ

ದಿನಾಂಕಃ 13-03-2026